**ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿ**

**ಒಟ್ಟು ಪ್ರಶ್ನೆಗಳು – ೧೫**

**ಪಟ್ಟಿ–೦೭**

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆರಡನೆಯ ಅಧಿವೇಶನ

**ಮಂಗಳವಾರ, ದಿನಾಂಕ: ೧೫ನೇ ಡಿಸೆಂಬರ್, ೨೦೨೦**

---

**ಸಮೂಹ – II**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

೨. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೩. ನಗರಾಭಿವೃದ್ಧಿ ಸಚಿವರು

೪. ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

೫. ಗಣಿ ಮತ್ತು ಭೂವಿಜ್ಞಾನ ಸಚಿವರು

೬. ಸಹಕಾರ ಸಚಿವರು

---

## ಬಸವನ ಗುಡಿಯ ಶ್ರೀ ರಾಘವೇಂದ್ರ ಸಹಕಾರಿ ಬ್ಯಾಂಕ್ ಅವ್ಯವಹಾರ ಕುರಿತು

**ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೯೧ (೭೮೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಬಸವನ ಗುಡಿಯಲ್ಲಿರುವ ಶ್ರೀ ರಾಘವೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸುಮಾರು ೪೫೦ ಕೋಟಿ ಮೌಲ್ಯದ ಬೃಹತ್ ಅವ್ಯವಹಾರ ನಡೆದಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೃಹತ್ ಅವ್ಯವಹಾರದಲ್ಲಿ ತೊಂದರೆಗೀಡಾಗಿರುವ ಠೇವಣಿದಾರರ ಸಂಖ್ಯೆ ಎಷ್ಟು ಹಾಗೂ ಪರಿಸ್ಥಿತಿಯನ್ನು ವಿವರಿಸುವುದು;

(ಇ) ಅವ್ಯವಹಾರದ ಸಂಪೂರ್ಣ ತನಿಖೆಗೆ ಯಾವ ಕ್ರಮ ವಹಿಸಲಾಗಿದೆ; ಯಾವ ತನಿಖಾ ಸಂಸ್ಥೆ ತನಿಖೆ ಕೈಗೊಂಡಿದೆ; ಇದರ ಫಲಿತಾಂಶವೇನು;

(ಈ) ಠೇವಣಿದಾರರಿಗೆ ಎಷ್ಟು ಕಾಲಮಿತಿಯೊಳಗೆ ಹಣ ಹಿಂತಿರುಗಿಸಲು ಕ್ರಮ ವಹಿಸಲಾಗಿದೆ? (ಅವ್ಯವಹಾರ ಆರೋಪಿಗಳ ವಿವರ ಹಾಗೂ ಅವ್ಯವಹಾರದ ಸ್ವರೂಪದ ಬಗೆಗಿನ ಪೂರ್ಣ ಮಾಹಿತಿ ಒದಗಿಸುವುದು)

## ಖಾಲಿ ಹುದ್ದೆಗಳ ಭರ್ತಿ ಮಾಡುವ ಬಗ್ಗೆ

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೯೨ (೮೩೫) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ನಗರ ಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳವಾರು ಸ್ಪಷ್ಟ ಮಾಹಿತಿ ನೀಡುವುದು)

(ಆ) ಖಾಲಿಯಿರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ತುಂಬಾ ಅನಾನುಕೂಲಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಇ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೂಡಲೇ ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು)

(ಈ) ಬೀದರ್ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಅನೇಕ ಅಧಿಕಾರಿ/ನೌಕರರು ಅನ್ಯ ಇಲಾಖೆ ಮತ್ತು ಸ್ವಂತ ವೇತನ ಶ್ರೇಣಿಗಳ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಮತ್ತು ಕಾಮಗಾರಿ ಅನುಷ್ಠಾನಗಳಲ್ಲಿ ಅಡಚಣೆ ಉಂಟಾಗಿದ್ದು, ಅದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

## ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ೩೩ ವರ್ಷ ಕಳೆದರೂ ತಿದ್ದುಪಡಿ ಮಾಡದಿರುವ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೭೫೮) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಹಕಾರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಡಿಪಿಎಆರ್, ಡಿಪಿಎಲ್ ಮತ್ತು ಹಣಕಾಸು ಇಲಾಖೆಗಳು ಅಭಿಪ್ರಾಯ ಸಲ್ಲಿಸಿದ್ದರೂ ಸಹ ಅಂತಿಮ ತಿದ್ದುಪಡಿ ನಿಯಮ ಪ್ರಕಟಿಸದಿರಲು ಕಾರಣವೇನು; ಯಾವ ಕಾರಣದಿಂದ ವಿಳಂಬವಾಗುತ್ತಿದೆ; (ಪೂರ್ಣ ವಿವರಗಳನ್ನು ನೀಡುವುದು)

(ಆ) ಜೇಷ್ಠತೆಯಲ್ಲಿ ಹಿರಿಯ ಸಿಡಿಓಗಳನ್ನು ಕೈ ಬಿಟ್ಟು ಕಿರಿಯವರಾಗಿರುವವರಿಗೆ ನಿಬಂಧಕರ ಹುದ್ದೆಗೆ ಮುಂಬಡ್ತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಈ ಬಗ್ಗೆ ಪರಿಶೀಲಿಸಿ ತೆಗೆದುಕೊಂಡ ಕ್ರಮಗಳೇನು; (ಪೂರ್ಣ ವಿವರಗಳನ್ನು ನೀಡುವುದು)

(ಇ) ಯಾವ ಕಾಲಮಿತಿಯೊಳಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿಯನ್ನು ಪೂರ್ಣಗೊಳಿಸಲಾಗುವುದು;

(ಈ) ದಿನಾಂಕ ೧೭–೮–೨೦೧೭ರ ಕೆ.ಎ.ಟಿ. ಬೆಂಗಳೂರು ಆದೇಶವನ್ನು ಅನುಷ್ಠಾನಗೊಳಿಸಲು ತಹಲ್‌ವರೆವಿಗೆ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)

# ಬೀದರ್ ಜಿಲ್ಲೆಯ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಜಮೀನು ಒದಗಿಸುವ ಬಗ್ಗೆ

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪ (೮೪೮) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಬೇಕಾಗಿರುವ ಜಮೀನನ್ನು ರೇಷ್ಮೆ ಇಲಾಖೆಯಿಂದ ಹಸ್ತಾಂತರಿಸುವುದಾಗಿ ಈ ಹಿಂದಿನ ಅಧಿವೇಶನದಲ್ಲಿ ಅಶ್ವಾಸನೆ ನೀಡಿದ್ದು ಇಲ್ಲಿಯವರೆಗೆ ಜಮೀನನ್ನು ಹಸ್ತಾಂತರಿಸದಿರುವುದಕ್ಕೆ ಕಾರಣವೇನು;

(ಆ) ಹಸ್ತಾಂತರಿಸದಿದ್ದಲ್ಲಿ I.C.R.N ಮಾನ್ಯತೆ ಸೀಗದಿರುವುದು ಹಾಗೂ ಕಾಲೇಜಿನ ಮಾನ್ಯತೆ ರದ್ದಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

# ಕೋಲಾರ ನಗರಸಭೆಯಲ್ಲಿರುವ ವಾರ್ಡ್‌ಗಳ ಕುರಿತು

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೯೫ (೭೭೨) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ನಗರಸಭೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ ಎಷ್ಟು; ಮತ್ತು ಒಟ್ಟು ವಿಸ್ತೀರ್ಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕೋಲಾರ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ರಸ್ತೆಗಳು ಸಂಪೂರ್ಣ ಹಾಳಾಗಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವುದು ನಿಜವೇ;

(ಈ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ಥಿಪಡಿಸಿ ಅಭಿವೃದ್ಧಿಪಡಿಸಲು ಇದುವರೆವಿಗೂ ಸರ್ಕಾರ ಕ್ರಮಕೈಗೊಳ್ಳದಿರುವುದು ನಿಜವೇ;

(ಉ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕಾಮಗಾರಿಗಾಗಿ ಸರ್ಕಾರ ಅನುದಾನವನ್ನೇನಾದರೂ ನಿಗದಿಪಡಿಸಿ ಬಿಡುಗಡೆ ಮಾಡಿದೆಯೇ;

(ಊ) ಹಾಗಿದ್ದಲ್ಲಿ, ಯಾವ ಯಾವ ಲೆಕ್ಕ ಶೀರ್ಷಿಕೆಗಳಡಿ, ಎಷ್ಟೆಷ್ಟು ಅನುದಾನವನ್ನು ಒದಗಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಋ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ಒದಗಿಸಲಾಗಿದೆ ಮತ್ತು ರಸ್ತೆ ದುರಸ್ಥಿ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

## ಆತ್ಮನಿರ್ಭರ ಯೋಜನೆಯಡಿ ಸಹಕಾರ ಕ್ಷೇತ್ರದಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೬ (೭೬೯) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆತ್ಮನಿರ್ಭರ ಯೋಜನೆಯಡಿ ಸಹಕಾರ ಕ್ಷೇತ್ರಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು;

(ಆ) ಸದರಿ ಮೊತ್ತದಲ್ಲಿ ಕೈಗೊಳ್ಳಲಾಗುವ ಕಾರ್ಯಕ್ರಮಗಳೇನು; ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯ ಕ್ರಮವೇನು;

(ಇ) ಸಹಕಾರ ರಂಗದಲ್ಲಿನ ಯಾವ ಯಾವ ಕಸುಬುದಾರರಿಗೆ ಅಥವಾ ಕ್ಷೇತ್ರದವರಿಗೆ ಈ ಯೋಜನೆಯ ಲಾಭ ದೊರೆಯಲಿದೆ?

# ಗುಲ್ಬರ್ಗಾ ಜಿಲ್ಲೆಯ ಬೇಲೂರು ಗ್ರಾಮದಲ್ಲಿರುವ ಕಲ್ಲು ಗಣಿಗಾರಿಕೆಯ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೮೪೨) ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗುಲ್ಬರ್ಗಾ ಜಿಲ್ಲೆ ಬೇಲೂರು ಗ್ರಾಮದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಆ) ಗ್ರಾಮದ ಸರಹದ್ದು ೫೦೦ ಮೀಟರ್ ಅಂತರದಲ್ಲಿ ಡೈನಾಮೆಟ್ ಸ್ಫೋಟ ಮಾಡುತ್ತಿದ್ದು, ಇದರಿಂದ ಗ್ರಾಮದ ಮನೆಗಳಿಗೆ ಹಾನಿಯಾಗುತ್ತಿದ್ದು, ಜನರಿಗೆ ಆರೋಗ್ಯ ಸಮಸ್ಯೆ ಕಾಡುತ್ತಿದ್ದು, ಈ ಬಗ್ಗೆ ಜಿಲ್ಲಾಡಳಿತ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಗಣಿಗಾರಿಕೆಗಾಗಿ ಈತನಕ ಎಷ್ಟು ಪರವಾನಿಗೆ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಹಲವಾರು ಕಡೆ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದು, ಈ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

# ಮಾವು ಅಭಿವೃದ್ಧಿ ಮಂಡಳಿಯ ಯೋಜನೆಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೮ (೭೯೨) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಾವು ಅಭಿವೃದ್ಧಿ ಮಂಡಳಿಯ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ನೀಡಿದ ಅನುದಾನ ಎಷ್ಟು; (ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಮಾವು ಅಭಿವೃದ್ಧಿ ಮಂಡಳಿಗೆ ನೀಡಲಾಗಿರುವ ಅನುದಾನ ಎಷ್ಟು;

(ಇ) ರಾಮನಗರ ಜಿಲ್ಲೆಯಲ್ಲಿ ಮಾವು ಅಭಿವೃದ್ಧಿ ಮಂಡಳಿ ವತಿಯಿಂದ ಸ್ಥಾಪಿಸಲು ಉದ್ದೇಶಿಸಿರುವ ಮಾವು ಸಂಸ್ಕರಣಾ ಘಟಕ ಯಾವ ಹಂತದಲ್ಲಿದೆ; ಇದಕ್ಕಾಗಿ ನಿಗದಿಪಡಿಸಿದ ಅನುದಾನ ಎಷ್ಟು; ಆ ಪೈಕಿ ಮಂಜೂರಾದ ಅನುದಾನ ಎಷ್ಟು?

## ಮಡಿಕೇರಿ ನಗರಸಭೆಯ ಒಳಚರಂಡಿ ನೀರನ್ನು ಸಂಸ್ಕರಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೯ (೭೬೮) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ನೀರನ್ನು ಯಾವ ರೀತಿಯಲ್ಲಿ ಮತ್ತು ಎಲ್ಲಿಗೆ ಹರಿಸಲಾಗುತ್ತಿದೆ; (ವಿವರ ನೀಡುವುದು)

(ಆ) ಈ ಒಳಚರಂಡಿ ನೀರನ್ನು ಜಲಮೂಲಗಳಿಗೆ ಬಿಡುವ ಮೊದಲು ಶುದ್ಧೀಕರಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಮತ್ತು ಯಾವ ರೀತಿಯಲ್ಲಿ ಶುದ್ಧೀಕರಿಸಲಾಗುತ್ತಿದೆ? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೦ (೭೮೬) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿರುವ ಒಟ್ಟು ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯಲ್ಲಿರುವ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಪ್ರತಿ ತಿಂಗಳು ಸಮರ್ಪಕವಾಗಿ ಪಡಿತರ ವಿತರಿಸಲಾಗುತ್ತಿದೆಯೇ; ಮತ್ತು ಪಡಿತರ ನೀಡಲು ಬಯೋಮೆಟ್ರಿಕ್ ಕಡ್ಡಾಯವಾಗಿ ಬಳಸಲಾಗುತ್ತಿದೆಯೇ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಪ್ರತಿ ತಿಂಗಳು ಸಮರ್ಪಕವಾಗಿ ಪಡಿತರ ನೀಡದಿರುವ ಕುರಿತು ಸ್ವೀಕೃತವಾದ ದೂರುಗಳೆಷ್ಟು ಮತ್ತು ದೂರುಗಳಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ರೇಷ್ಮೆ ಇಲಾಖೆ ಜಮೀನಿನಲ್ಲಿ ಸಂಕೀರ್ಣಗಳ ನಿರ್ಮಾಣ ಮಾಡುವ ಕುರಿತು

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೧ (೮೦೮) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೌಬಾದ್ ಬಳಿಯ ರೇಷ್ಮೆ ಇಲಾಖೆ ಜಮೀನಿನಲ್ಲಿ ಜಿಲ್ಲಾ ಆಡಳಿತ ಕಛೇರಿಗಳ ಸಂಕೀರ್ಣ ನಿರ್ಮಿಸಲು ಜಿಲ್ಲಾ ಆಡಳಿತದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ;

(ಆ) ನೌಬಾದ್ ಬಳಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣಕ್ಕೆ ಜನಪ್ರತಿನಿಧಿಗಳು, ಸಂಘಟನೆಗಳು, ಸಾರ್ವಜನಿಕರು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು?

## ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಹೊಂದಿರುವ ಜಮೀನಿನ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೨ (೭೨೨) ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಒಟ್ಟು ಎಷ್ಟು ಎಕರೆ ಜಮೀನು ಹೊಂದಿದೆ;

(ಆ) ಸದರಿ ಜಮೀನಿನಲ್ಲಿ ಎಷ್ಟು ಎಕರೆ ಜಮೀನು ಯಾವುದೇ ಬೆಳೆ ಬೆಳೆಯದೆ ಪಾಳು ಬಿದ್ದಿದೆ;

(ಇ) ಅದರಲ್ಲಿ ಬೆಳೆ ಬೆಳೆಯದಿರಲು ಕಾರಣಗಳೇನು;

(ಈ) ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಯಾವುದಾದರೂ ಜಮೀನು ಒತ್ತುವರಿಯಾಗಿದೆಯೇ; ಹಾಗಿದ್ದಲ್ಲಿ, ಇದುವರೆಗೂ ತೆರವು ಕಾರ್ಯಾಚರಣೆಯನ್ನು ಏಕೆ ಕೈಗೊಂಡಿಲ್ಲ?

## ಕೆ.ಐ.ಎ.ಡಿ.ಬಿ. ವತಿಯಿಂದ ಸೋಂಪುರ ಹೋಬಳಿಯ ಜಮೀನಿನ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೧೦೩ (೮೨೩) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆ.ಐ.ಎ.ಡಿ.ಬಿ ವತಿಯಿಂದ ಸೋಂಪುರ ಹೋಬಳಿಯಲ್ಲಿ ಎಷ್ಟು ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳಲಾಗಿದೆ; ಹಾಗೂ ಯಾವ ಯಾವ ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಕೈಗಾರಿಕಾ ಉದ್ದೇಶಕ್ಕಾಗಿ ಹಂಚಿಕೆ ಮಾಡಿರುವ ಜಮೀನಿಗೆ ಎಕರೆಗೆ ಎಷ್ಟು ಹಣ ನಿಗದಿ ಮಾಡಲಾಗಿದೆ;

(ಇ) ಹಂಚಿಕೆ ಮಾಡಲಾದ ೨ನೇ ಹಂತದಲ್ಲಿ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಬಫರ್ ಜೋನ್‌ಗೆ ಬರುವ ಪ್ರದೇಶವನ್ನು ಕೈಗಾರಿಕಾ ಉದ್ದೇಶದಿಂದ ಕೈಬಿಡಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಹಂಚಿಕೆಯಾಗಿದ್ದ ಕೈಗಾರಿಕೆಗಳಿಗೆ ಬೇರೆ ಯಾವ ಸ್ಥಳದಲ್ಲಿ ಹಂಚಿಕೆ ಮಾಡಲಾಗಿದೆ; (ವಿವರ ಒದಗಿಸುವುದು)

(ಈ) ಕೆ.ಐ.ಎ.ಡಿ.ಬಿ. ವತಿಯಿಂದ ಹಂಚಿಕೆ ಮಾಡುವಾಗ ಒಂದು ಎಕರೆಗೆ ರೂ.೫೭.೦೦ ಲಕ್ಷ ನಿಗದಿ ಮಾಡಲಾಗಿದ್ದು, ನಂತರ ಬಫರ್ ಜೋನ್ ಇದ್ದ ಕಾರಣ ರೂ. ೭೫.೦೦ ಲಕ್ಷಕ್ಕೆ ಏರಿಕೆ ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ಈ ಸಂಬಂಧ ವಿಧಿಸುತ್ತಿರುವ ನೋಂದಣಿ ಶುಲ್ಕ ಎಷ್ಟು; (ವಿವರ ಒದಗಿಸುವುದು)

(ಉ) ಹಾಲಿ ರೂ. ೫೭.೦೦ ಲಕ್ಷಕ್ಕೆ ನೋಂದಣಿ ಮಾಡಿಕೊಂಡಿದ್ದು ನಂತರ ರೂ.೭೫.೦೦ ಲಕ್ಷ ನಿಗದಿ ಮಾಡಿ ನಂತರ ವ್ಯತ್ಯಾಸದ ಹಣವನ್ನು ಕಟ್ಟಿ ನೋಂದಣಿ ಮಾಡಲು ನೋಂದಣಾಧಿಕಾರಿಗಳು ಒಟ್ಟು ರೂ. ೭೫.೦೦ ಲಕ್ಷದ ನೋಂದಣಿ ಶುಲ್ಕ ಪಡೆಯುತ್ತಿರುವುದು ಹಾಗೂ ರೂ. ೫೭.೦೦ ಲಕ್ಷಕ್ಕೆ ನೋಂದಣಿ ಹಣವನ್ನು ಕಟ್ಟಿರುವುದನ್ನು ಪರಿಗಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸಹಕಾರ ಇಲಾಖೆಯ ಲೆಕ್ಕ ಪರಿಶೋಧನೆ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೧೦೪ (೭೮೩) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಹಕಾರ ಇಲಾಖೆಯಲ್ಲಿ ಕಳೆದ ೩ ವರ್ಷಗಳಲ್ಲಿ ಲೆಕ್ಕ ಪರಿಶೋಧನಾ ಇಲಾಖೆಯು ಸಂಗ್ರಹಿಸಿರುವ ಒಟ್ಟು ಆಡಿಟ್ ಫೀ (ವರ್ಷಾವಾರು) ಮೊತ್ತ ಎಷ್ಟು;

(ಆ) ಆರ್ಥಿಕ ವರ್ಷಗಳಲ್ಲಿ ಇಲಾಖೆಯು ಸಂಬಳ, ಸಾರಿಗೆ ಭತ್ಯೆ ಹಾಗೂ ಇತರೆ ಭತ್ಯೆ ಇತ್ಯಾದಿಗಳಿಗೆ ಖರ್ಚು ಮಾಡಿರುವ ಮೊತ್ತ ಎಷ್ಟು; (ವರ್ಷಾವಾರು ಮಾಹಿತಿ ನೀಡುವುದು)

(ಇ) ಚಾರ್ಟೆಡ್ ಆಕೌಂಟೆಂಟ್ ಆಡಿಟ್ ಆದ ಮೇಲೆ ಇಲಾಖೆಯ ಮುಂದಿನ ಕ್ರಮ ಏನು;

(ಈ) ವಾಣಿಜ್ಯ ವಿಷಯದಲ್ಲಿ ಪದವಿ ಹೊಂದಿದವರನ್ನು ಆರ್ಥಿಕ ಇಲಾಖೆ ಸ್ವೀಕರಿಸಲು ಸಿದ್ಧವಿರುವಾಗ, ಇಲಾಖಾ ಸಿಬ್ಬಂದಿ–ಅಧಿಕಾರಿಗಳ ಸೇವೆಯನ್ನು ಮಿಳಿತಗೊಳಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಿದೆ; (ಹಣಕಾಸಿನ ವರದಿ ಶಿಫಾರಸ್ಸಿನ ಹಿನ್ನಲೆಯಲ್ಲಿ)

(ಉ) ಆರ್ಥಿಕವಾಗಿ ಹೊರೆಯಾಗಿರುವ ಸದರಿ ಇಲಾಖೆ ಬಗ್ಗೆ ತುರ್ತಾದ ತೀರ್ಮಾನಗಳನ್ನು ಮತ್ತೊಮ್ಮೆ ಪರಿಶೀಲಿಸಿ ಕೈಗೊಳ್ಳುವ ಬಗ್ಗೆ ಸರ್ಕಾರದ ಕ್ರಮಗಳೇನು?

## ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡಿರುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೫ (೭೯೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು

ವರ್ಷಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯಲ್ಲಿ ಎಷ್ಟು ರೈತರಿಗೆ ಸಾಲ ನೀಡಲಾಗಿದೆ;

(ಆ) ಈ ಯೋಜನೆಯಡಿ ನೀಡುವ ಸಾಲದ ಗರಿಷ್ಠ ಮತ್ತು ಕನಿಷ್ಠ ಮೊತ್ತ ಎಷ್ಟು;

(ಇ) ಮೇಲ್ಕಂಡ ಎರಡು ಜಿಲ್ಲೆಗಳಲ್ಲಿ ಎಷ್ಟು ರೈತರಿಗೆ ಸಾಲ ಮನ್ನಾ ಮಾಡಲಾಗಿದೆ; ಸಾಲಮನ್ನಾ ಮಾಡಲು ಸರ್ಕಾರ ವಿಧಿಸಿರುವ ಮಾನದಂಡಗಳೇನು?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – ಪ್ರತಿಗಳು (ಪಿ1)

**List of Questions for Oral Answers**

**Total No. of Questions - 15**

# LIST - 07

# KARNATAKA LEGISLATIVE COUNCIL

## ONE HUNDRED AND FORTY SECOND SESSION

## Tuesday, the 15th December, 2020

---

**GROUP - II**

1. Minister for Large and Medium Scale Industries
2. Minister for Food and Civil Supplies and Consumer Affairs
3. Minister for Urban Development
4. Minister for Municipalities and Horticulture and Sericulture
5. Minister for Mines and Geology
6. Minister for Co-operation

---

### IRREGULARITY IN SRI RAGHAVENDRA CO-OPERATIVE BANK IN BASAVANAGUDI

**Dr.Tejaswini Gowda (Elected by Legislative Assembly) -**

91 (784) Will the Minister for Co-operation be pleased to state:-

a) whether it has come to the notice of the Government that the large scale irregularity worth of Rs.450 crores has taken place in Sri Raghavendra Co-operative Bank in Basavanagudi of Bengaluru;

b) the number of depositors facing hardship due to large irregularity and details of the current situation be furnished;

c) the particulars of steps taken for complete investigation of the irregularity; the name of the investigation agency that has takenup the investigation; the result thereof;

d) the timelimit within which the step has taken to refund the amount to the depositors? (details of the accused persons of irregularity and complete details of the nature of irregularity be furnished)

## FILLING UP OF VACANT POSTS

**Sri Raghunath Rao Malkapure (Elected by Legislative Assembly) -**

92 (835) Will the Minister for Municipalities and Horticulture and Sericulture be pleased to state:-

a) the number of posts lying vacant in the local bodies of the State; (the complete information of city municipal council, town municipal council and town panchayatwise be furnished)

b) whether it has come to the notice of the Government that the inconvenience is being caused to the public in the local bodies since various vacant posts are not filled up; (details be furnished)

c) if so, the immediate actions taken by the Government in this regard; (information be furnished)

d) the action taken by the Government to resolve the inconvenience being caused to the public and in execution of works since many officials/employees are working on deputation in other departments on their own pay scale in city municipal council, town municipal council and town panchayats of Bidar? (details be furnished)

## AMENDMENT OF CADRE AND RECRUITMENT RULES OF CO-OPERATION DEPARTMENT

**Sri N. Appajigowda (Local Authorities Constituency) -**

93 (758) Will the Minister for Co-operation be pleased to state:-

a) the reasons for not publishing the final amendment rules even after the DPAR, DPL and Finance department have submitted their opinion for the amendment of cadre and recruitment rules of Co-operation department; the reasons for the delay; (complete details be furnished)

b) whether it has come to the notice of the Government that the juniors are promoted to the post of Registrar by dropping the senior CDOs from the seniority; the steps taken by the Government after examining in this regard; (complete details be furnished)

c) the timelimit within which the amendment of cadre and recruitment rules of the department would be completed;

d) the steps taken to implement an order passed by K.A.T. on 17.08.2017 Bengaluru till date? (details be furnished)

**LAND FOR COLLEGE OF HORTICULTURE IN BIDAR DISTRICT**

**Sri Aravind Kumar Arali (Elected by Legislative Assembly) -**

94 (848) Will the Minister for Municipalities and Horticulture and Sericulture be pleased to state:-

a) the reasons for not alienating the lands so far though the assurance has been given in the previous session that the required land would be alienated by the Sericulture department to the college of Horticulture of Bidar district;

b) whether it has come to the notice of the Government that the recognition of I.C.R.N would not be obtained and recognition of the college would be cancelled, if the land has not been alienated; if so, the steps taken by the Government?

## WARDS IN KOLAR CITY MUNICIPAL COUNCIL

**Sri Govinda Raju (Elected by Legislative Assembly)**

95 (772) Will the Minister for Urban Development be pleased to state:-

a) the number of wards in Kolar City Municipal Council; and the total extent thereof; (complete information be furnished)

b) whether it has come to the notice of the Government that the roads are completely ruined in the limits of Kolar city Municipal Council;

c) if so, whether it is true that the Public and the vehicle riders are facing hardship since the roads are completely ruined;

d) if so, whether it is true that the steps has not been taken by the Government to develop these roads by repairing so far;

e) if so, whether the grant has been earmarked and released by the Government for the works of development of these roads;

f) if so, grant that has been provided under various heads of accounts; (complete information be furnished)

g) if so, the grant that has been provided and the timelimit within which the repair works of the roads would be takenup? (complete information be furnished)

## PROGRAMMES OF CO-OPERATION SECTOR UNDER ATMA NIRBHAR SCHEME

**Sri K.C.Kondaiah (Local Authorities Constituency) -**

96 (769) Will the Minister for Co-operation be pleased to state:-

a) the grant released by the Central Government to the Co-operative sector under the Atma Nirbhar scheme;

b) the particulars of programmes that would be takenup in the said amount; the particulars of steps of selection process of the beneficiaries;

c) the particulars of artisans or fields to who would get benefits of the said scheme in the co-operative sector?

## QUARRY IN THE BELURU VILLAGE OF KALABURAGI DISTRICT

**Sri M. Narayanaswamy (Local Authorities Constituency) -**

97 (842) Will the Minister for Mines and Geology be pleased to state:-

a) whether it has come to the notice of the Government that quarry is being taken place in Belur village of Kalaburagi district; if so, the particular of steps takenup; (details be furnished)

b) the action taken by the district administration about the damage being caused to the houses of the village and health problems of public due to explosion of dynamites in the distance of 500 meters from the boundaries of the village; (details be furnished)

c) the number of license that have been issued for mining in the State so far; (districtwise details be furnished)

d) the steps taken by the Government to control this illegal mining since the illegal mining is being taken place in several places of the State? (details be furnished)

## MANGO DEVELOPMENT BOARD

**Sri S.Ravi (Local Authorities Constituency) -**

98 (792) Will the Minister for Municipalities and Horticulture and Sericulture be pleased to state:-

a) the grant provided to the Mango Development Board till date since its inception in the State; (details be furnished)

b) the grant provided by the Government to the Mango Development Board for the last three years;

c) the present stage of the mango processing unit that has been intended to establish in Ramanagara district by the Mango Development Board; the grant earmarked therefor; out of which, the grant sanctioned?

**TREATMENT OF SEWAGE WATER OF MADIKERI CITY MUNICIPAL COUNCIL**

**Sri M.P.Sunil Subramani (Local Authorities Constituency) -**

99 (768) Will the Minister for Municipalities and Horticulture and Sericulture be pleased to state:-

a) the manner in which and the place where the sewage water generated in Madikeri city is being flown; (details be furnished)

b) whether the sewage water is being purified before releasing to the water sources; if so, the manner in which and the particulars of the place where it is being purified? (details be furnished)

**FAIR PRICE SHOPS IN KALABURAGI DISTRICT**

**Sri Sunil Vallyapur (Elected by Legislative Assembly) -**

100 (786) Will the Minister for Food and Civil Supplies and Consumer Affairs be pleased to state:-

a) the total number of fair price shops in Kalaburagi district; (talukwise information be furnished)

b) whether all fair price shops are distributing ration every month properly in the district; and whether biometric is being used compulsorily to provide ration; (talukwise information be furnished)

c) the number of complaints that have been received for not distributing the ration every month properly and the steps taken for the complaints? (talukwise information be furnished)

## CONSTRUCTION OF COMPLEX IN THE LANDS OF SERICULTURE DEPARTMENT

**Sri Vijay Singh (Local Authorities Constituency) -**

101 (808) Will the Minister for Municipalities and Horticulture and Sericulture be pleased to state:-

a) whether the proposal has been submitted to the Government from the district administration to construct the complex of district administration offices in the land of sericulture department located near Naubad;

b) whether it has come to the notice of the Government that the people representatives, organisations and the public are being opposed for the construction of complex of district office near Naubad; if so, steps taken in this regard?

## LANDS OF THE HORTICULTURE DEPARTMENT IN KODAGU DISTRICT

**Smt. S.Veena Achaiah (Elected by Legislative Assembly) -**

102 (722) Will the Minister for Municipalities and Horticulture and Sericulture be pleased to state:-

a) the number of acres of land of the Horticulture department in Kodagu district;

b) out of which, the number of acres of barren land without growing any crops;

c) the reasons for not growing any crops theirin;

d) whether any land belongs to the Horticulture department in the district has been encroached; if so the reasons for not taking up the eviction work so far?

## K.I.A.D.B. LAND IN SOMPURA HOBLI

**Sri Prakash K. Rathod (Nominated) -**

103 (823) Will the Minister for Large and Medium Scale Industries be pleased to state:-

a) the number of acres of land acquired for industrial purpose by the K.I.A.D.B in Sompura hobli; the particulars of the industries to which the said land has been allotted; (complete information be furnished)

b) the amount that has been fixed to per acre of land that has been allotted for industrial purpose;

c) whether the allotted land coming under the buffer zone has been dropped by the pollution control board from the industrial purpose in the 2$^{nd}$ stage; if so, the particulars of alternative places where the land has been allotted to the said industries; (details be furnished)

d) whether it is true that the fixation of rate per acre has been increased from Rs.57.00 lakhs which was fixed by K.I.A.D.B. during allocation to Rs.75.00 lakhs due to buffer zone; (details be furnished) if so, the registration fees imposing in this regard;

e) whether it has come to the notice of the Government that since they have registered for Rs.57.00 lakhs at present, the registrar are receiving registration fee for total Rs.75.00 lakhs to register the land by remittance of difference amount after fixation Rs.75.00 lakhs and considering the remittance of registration fee of Rs. 57.00 lakhs; if so, the steps taken by the Government to set right the same?

**AUDIT OF CO-OPERTAION DEPARTMENT**

**Smt. Bharathi Shetty (Nominated) -**

104 (783) Will the Minister for Co-operation be pleased to state:-

a) the total audit fees collected by the Audit department (yearwise) in the Co-operative department for the last 3 years;

b) the amount spent by the department for salary, travelling allowance and other allowances of the department in these financial years; (yearwise information be furnished)

c) the further action of the department after the audit of chartered accountant;

d) the manner in which the Government would take action to merge the service of the departmental staff-officers while the Finance department is ready to receive the persons who got B.com degree; (in the backdrop of recommendations of the financial report)

e) the measures of the Government about taking immediate decisions about the said department which is financially burden after re-consideration?

## LOANS TO FARMERS AT LESS INTEREST

**Sri R. Dharmasena (Local Authorities Constituency) -**

105 (794) Will the Minister for Co-operation be pleased to state:-

a) the number of farmers to whom loan has been provided in the scheme of providing loan at a less interest rate in the co-operative sector for the last two years in Mysuru and Chamarajanagar districts;

b) the maximum and minimum amount of loan providing under the said scheme;

c) the number of farmers to whom loan has been waived off in the above two districts; the criteria prescribed by the Government for loan waiving?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD- Copies